g.No. M. 1550.
KODAGU" MERCARA, (Coorg).

-26-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಕು ೮—೧೨—೧೯೪೪ನೇ ಶುಕ್ರವಾರ. | ಸಂಚಿಕೆ ೨೭

ಮಹಾತ್ಮರ ಹದಿನೈದು ಉಪವಾಸಗಳು.

ಮಹಾತ್ಮಾಜಿಯವರು 76ನೇ ವರ್ಷದಲ್ಲಿ ಕಾಲಿಕ್ಕಿ ಎರಡು ತಿಂಗಳುಗಳಾದವು. ಈ ವಯಸ್ಸಿನಲ್ಲಿ ಮತ್ತೊಂದು ಉಪವಾಸವು ತನಗಾಗಿ ಕಾದಿದೆಯೆಂದು ಅವರನ್ನುತ್ತಿದ್ದಾರೆ. ಆ ದೈವಿಕ ಪ್ರೇರಣೆಯನ್ನು ಅವರು ಕಾಯುತ್ತಿರುವದಾಗಿ ತಿಳಿಸಿದ್ದಾರೆ. ಅವರ ಪ್ರಕೃತಿಯು ಚೆನ್ನಾಗಿಲ್ಲ. ದೈನಿಕ ಕೆಲಸಗಳನ್ನು ತೊಂದರೆಯಿಲ್ಲದೆ ಮಾಡಬಲ್ಲರಾದರೂ ಕಳೆದ ವಾರದಲ್ಲಿ ಎರಡು ಸಾರಿ ಅವರಿಗೆ ಸ್ಮೃತಿತಪ್ಪಿತ್ತಂತೆ. ತಾರೀಕು 4-12-44 ರಿಂದ ತಾ. 31-12-44 ರ ವರೆಗೆ ಕೆಲಸದ ಉಪವಾಸ ಒಂದನ್ನು ಅವರು ಕೈಕೊಂಡಿದ್ದಾರೆ. ಯಾವ ರೀತಿಯ ರಾಜಕೀಯ, ಸಾಮಾಜಿಕ ಕಾರ್ಯಗಳನ್ನು ಅವರು ಮಾಡುವಂತಿಲ್ಲ. ಪತ್ರಗಳಿಗೆ ಜವಾಬು, ಸಂದರ್ಶಣೆ ಇವೆಲ್ಲವನ್ನೂ ಅವರು ನಿಲ್ಲಿಸಿರುವರು. ಈ ಅವಧಿಯನ್ನು ಅವರು ಕೇವಲವಾಗಿ ಭಗವತ್ಪ್ರಾರ್ಥನೆಯಲ್ಲಿಯೇ ಕಳೆಯುವರು. ಗಾಂಧೀಜಿಯವರ ಮನಸ್ಸು ಬಹುವಾಗಿ ನೊಂದುಹೋಗಿದೆ. ಜಗತ್ತಿನ ಪ್ರತಿ ಮೂಲೆಮೂಲೆಗಳಲ್ಲೂ ನಡೆಯುತ್ತಿರುವ ಹಿಂಸಾಕೃತ್ಯಗಳು, ಸಮಾಜದಲ್ಲಿಯ ಪಾಪಾಚಾರಗಳು, ವ್ಯಾಪಾರಿಗಳ ಧನಲಾಲಸೆ, ಬಡವರ ಕರುಳಿನ ಕ್ರಂದನ ಇವು ಅವರ ಮಾನಸ ಹೃದಯದ ಸ್ಥಿರತೆಯನ್ನು ಕದಡಿವೆ. ಹೊಟ್ಟೆಗೆ ಅನ್ನವಿಲ್ಲದೆ ಒಂದೆಡೆ ಜನರು ಸಾಯುತ್ತಿದ್ದಾರೆ. ಅರಮನೆಗಳ ಉಪ್ಪರಿಗೆಯಲ್ಲಿ ಸುಖೋಪಭೋಗದಲ್ಲಿ ಕೆಲವರು ತಲ್ಲೀನರಾಗಿದ್ದಾರೆ. ದಿವಸವಿಡಿ ಶ್ರಮಿಸಿ ಹೊಟ್ಟೆತುಂಬಿಸಿಕೊಳ್ಳಲಾರದೆ ಅಳುಬಿಡುವವರೊಂದೆಡೆಯಾದರೆ ಶರೀರವನ್ನು ಅಲುಗಿಸದೆ ಕೂತಲ್ಲೇ ತಿಂದು ಬೊಜ್ಜು ಬೆಳೆಸುವವರೊಂದೆಡೆ. 'ಏಕಂ ವಿಪ್ರ ಬಹುದಾವದಂತಿ' ಎಂಬ ಧರ್ಮೋಪದೇಶ ಮಾಡುವ ನಾಡಿನಲ್ಲಿ ಇಂದು ನಡೆಯುತ್ತಿರುವ ಕೃತ್ಯಗಳಿವೆ. ಪ್ರತಿಯೊಂದು ವಸ್ತುವಿನಲ್ಲಿಯೂ ಪರಮಾತ್ಮನ ರೂಪವನ್ನು ನೋಡಿದ ಆರ್ಶೇಯ ಮುನಿಕುಲ ಸಂಜಾತರೆಂದು ಕೊಳ್ಳುವವರ ನಡತೆಯಿದು. ಧಾರ್ಮಿಕ ಭಾವನೆಗಳಿಗೆ ಲೋಪಬಂದು ಜಗತ್ತು ಈ ರೀತಿ ಸ್ವಾರ್ಥತೆ, ಸ್ವಚ್ಛಂದತೆಗೆ ಬಲಿಯಾಗಿ ದಾರಿತಪ್ಪಿ ನಡೆಯುತ್ತಿದೆ. ಈ ವಿಚಾರವು ಮಹಾತ್ಮರ ಋಷಿಹೃದಯದ ಶಾಂತಿಯನ್ನು ಕೆಡಿಸಿದೆ. ಇದಕ್ಕಾಗಿ ಅವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಮತ್ತೊಂದು ಉಪವಾಸದ ನಿರೀಕ್ಷಣೆಯಲ್ಲಿದ್ದಾರೆ. ಮಹಾತ್ಮರು ಈ ಇಳಿವಯಸ್ಸಿನಲ್ಲಿ ಉಪವಾಸ ಕೈಕೊಳ್ಳಬಾರದು. ಕಳೆದ ತನ್ನ 21 ದಿನಗಳ ಉಪವಾಸದಲ್ಲಿ ಸಾವಿನ ದಡಕ್ಕೆ ಮುಟ್ಟಿ ಬಂದಿದ್ದಾರೆ. ಆದ್ದರಿಂದ ಮುಂದೆ ಉಪವಾಸಮಾಡಕೂಡದು ಎಂಬುದಾಗಿ ಹಿಂದೂದೇಶವಿಡೀ ಅವರನ್ನು ಕೇಳುತ್ತಿದೆ. ಆದರೆ ಮಹಾತ್ಮರು ಸ್ಪಷ್ಟವಾಗಿ ನುಡಿದಿರುವಂತೆ ಅವರ ಅಂತರಾತ್ಮನ ಕರೆಯು ಬಂದಾಗ ಯಾವುದನ್ನು ಲೆಕ್ಕಿಸದೆ ಉಪವಾಸ ಮಾಡಿಯೇ ತೀರುವರು.

ಅವರ ಈ ವರೆಗಿನ ಜೀವಾವಧಿಯಲ್ಲಿ ಅವರು ಹದಿನೈದುಬಾರಿ ಉಪವಾಸ ಮಾಡಿದ್ದಾರೆ. ಎರಡು ಸಾರಿ 'ಸಾಯುವ ತನಕ ಉಪವಾಸ' ಕೈಕೊಂಡಿದ್ದರು. ಎರಡು ಸಂದರ್ಭದಲ್ಲೂ ಧ್ಯೇಯಸಾಫಲ್ಯವಾಗಿ ಸಾವಿನ ಹಸ್ತದಿಂದ ಉಳಿವರು. ಅವರು ಆತ್ಮಶುದ್ಧಿಗಾಗಿ, ಆಶ್ರಮದ ಜನರ ತಪ್ಪಿಗಾಗಿ, ರಾಷ್ಟ್ರೀಯ ಧ್ಯೇಯಕ್ಕಾಗಿ, ಹರಿಜನ ಉದ್ಧಾರಕ್ಕಾಗಿ, ಹಿಂದೂ ಮುಸ್ಲಿಂ ಐಕ್ಯತೆಗಾಗಿ ಉಪವಾಸಮಾಡಿದ್ದಾರೆ. ಉಪವಾಸವು ಸಾಧುಸಂತರ ಒಂದು ಸಾಧನ. ಶರೀರವನ್ನು ಹಿಡಿತಕ್ಕೆ ತರಲು, ದುರ್ಗುಣಗಳನ್ನು ದೂರ ಮಾಡಲು ಪ್ರಯೋಗಿಸುತ್ತಿದ್ದ ಅಸ್ತ್ರವದು. 'ಗೌತಮಬುದ್ಧರು ಉಪವಾಸದಿಂದ ಶರೀರವನ್ನು ದಂಡಿಸಿದರು' ಇದು ಸಾಧನಗಳಲ್ಲೊಂದು. ಮಹಾತ್ಮಗಾಂಧಿಯವರ ಉಪವಾಸ ಪರಂಪರೆ ಚರಿತ್ರೆಯಲ್ಲಿ ಹಿರಿದಾದುದು. ಇವರು ಉಪವಾಸವನ್ನು ವ್ಯಕ್ತಿಯ ಕಾರ್ಯಕ್ಷೇತ್ರದಿಂದ ಸಾರ್ವಜನಿಕ ರಂಗಸ್ಥಳಕ್ಕೆ ತಂದಿರುವರು.

ನಲುವತ್ತು ವರ್ಷಗಳ ಹಿಂದೆ ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ತಮ್ಮ ಜೀವನದ ಪ್ರಥಮ ಉಪವಾಸ ವ್ರತವನ್ನು ಮಾಡಿದರು. 1913 ರಲ್ಲಿ ಆಫ್ರಿಕಾದಲ್ಲಿಯ ತಮ್ಮ ಆಶ್ರಮದ ಸಹಚರಿಗಳ ತಪ್ಪಿಗಾಗಿ ಒಂದು ವಾರದ ಪ್ರಾಯಶ್ಚಿತ್ತ ಉಪವಾಸ ಮಾಡಿದರು. ಮರುವರ್ಷ ಇದೇ ಕಾರಣಕ್ಕಾಗಿ ಎರಡು ವಾರಗಳ ಉಪವಾಸ ಮಾಡಿದರು. ಹಿಂದೂದೇಶದಲ್ಲಿ ಅವರು ಮಾಡಿದ ಮೊದಲನೆ ಉಪವಾಸವೆಂದರೆ 1918 ರ ಮಾರ್ಚಿ ತಿಂಗಳ 12 ರಿಂದ. ಈ ಉಪವಾಸವು ಮೂರೇ ದಿನ ನಡೆಯಿತು. ಅಷ್ಟರಲ್ಲಿ ಕಾರ್ಖಾನೆಗಳ ವ್ಯವಸ್ಥಾಪಕರು ಕೂಲಿಗಾರರ ಕೇಳಿಕೆಯನ್ನು ಒಪ್ಪಲು ಮುಂದೆ ಬಂದರು. 1919ನೇ ಇಸವಿ ಏಪ್ರಿಲ್ ತಿಂಗಳಲ್ಲಿ ನಡಿಯಾಡದಲ್ಲಿ ಗಾಂಧಿ ಅನುಯಾಯಿಗಳೆನ್ನುವವರು ಒಂದೆಡೆ ರೈಲ್ವೆ ಕಂಬಿಯನ್ನು ಕಿತ್ತು ತೆಗೆದರೆಂದು ಉಪವಾಸಮಾಡಿದರು. ರೈಲು ಕಂಬಿ ಕೀಳುವದು ಹಿಂಸಾಕೃತ್ಯ. ಸತ್ಯಾಗ್ರಹ ನೀತಿಗೆ ವಿರುದ್ಧವಾದುದು. ಆದ್ದರಿಂದ ಅವರು ಮೂರು ದಿನಗಳ ಉಪವಾಸಮಾಡಿದರು. ತಪ್ಪುಮಾಡಿದವರು ಈ ಅವಧಿಯಲ್ಲಿ ತಪ್ಪನ್ನು ಒಪ್ಪಿಕೊಂಡರು. 1921 ರಲ್ಲಿ ಪ್ರಿನ್ಸ್ ಆಫ್ ವೇಲ್ಸರ ಆಗಮನಕಾಲಕ್ಕೆ ನಡೆದ ಹಿಂಸಾಕೃತ್ಯಗಳಿಗಾಗಿ ಐದು ದಿನಗಳ ಉಪವಾಸ ಮಾಡಿದರು. 1922 ನೇ ಫೆಬ್ರವರಿ 5 ರಲ್ಲಿ ಚೌರಿಚೌರಾ ದುರಂತದಲ್ಲಿ ಜೀವಸಹಿತ ಸುಡಲ್ಪಟ್ಟ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರು ಮತ್ತೆರಡು ಕಾನ್ಸ್‌ಟೇಬಲುಗಳನ್ನು ಕೊಂದ ಹಿಂಸೆಗಾಗಿ ಐದು ದಿನಗಳ ಉಪವಾಸ ಮಾಡಿದರು. ಆಗ ನಡೆಯುತ್ತಿದ್ದ ಕಾನೂನುಭಂಗ ಚಳುವಳವನ್ನು ಸಹ ನಿಲ್ಲಿಸಿದರು. 1924 ರಲ್ಲಿ ದೇಶದ ಹಲವೆಡೆ ಹಿಂದೂ ಮುಸ್ಲಿಂ ದಂಗೆಗಳೆದ್ದು ಅವ್ಯವಸ್ಥೆಯಾಗಿದ್ದಾಗ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಮೌಲನಾ ಮಹಮ್ಮದಾಲಿಯವರ ಮನೆಯಲ್ಲಿ 21 ದಿನಗಳ ಉಪವಾಸ ಮಾಡಿದರು. ಇದರಿಂದ ಹಿಂದೂದೇಶದ ಉದ್ದಗಲಕ್ಕೂ ಒಂದು ರೀತಿಯ ಜಾಗೃತಿಯುಂಟಾಗಿ ಸರ್ವಪಕ್ಷೀಯ ಸಮ್ಮೇಳನ ಒಂದು ನಡೆದು ಧಂಗೆಗೆ ಕಾರಣರಾದವರನ್ನು ನಿಶೇಧಿಸಿ ಗಾಂಧೀಜಿಯವರಿಗೆ ಭರವಸೆಕೊಟ್ಟು ಉಪವಾಸ ನಿಲ್ಲಿಸಲು ಕಾರಣರಾದರು. 1925 ರಲ್ಲಿ ಸಬರಮತಿ ಆಶ್ರಮದಲ್ಲಿಯ ಸದಸ್ಯರ ತಪ್ಪಿಗಾಗಿ ಏಳು ದಿನಗಳ ಉಪವಾಸ ಮಾಡಿದರು.

1932 ರಲ್ಲಿ ಗಾಂಧೀಜಿಯವರು ಎರವಾಡ ಜೈಲಿನಲ್ಲಿ ಸಜೆ ಅನುಭವಿಸುತ್ತಿದ್ದರು. ಆಗ ಕೋಮುವಾರು ಪ್ರಾತಿನಿಧ್ಯದ ಮಸೂದೆಯನ್ನು ಸರಕಾರವು ಜಾರಿಯಲ್ಲಿ ತಂದಿತು. ಇದನ್ನು ನಿಲ್ಲಿಸಲು 'ಮರಣ ಪರ್ಯಂತರ ಉಪವಾಸ'ವನ್ನು ಕೈಕೊಂಡರು. ಐದು ದಿನಗಳ ನಂತರ ಪೂನಾ ಒಪ್ಪಂದವಾಗಿ ದಳಿತವರ್ಗದವರು ಕೋಮುವಾರು ಪ್ರಾತಿನಿಧ್ಯ ತತ್ವವನ್ನು ಅಂಗೀಕರಿಸುವದಿಲ್ಲವೆಂದೂ ಭರವಸೆಯಿತ್ತರು. ಸರಕಾರವು ಇದನ್ನು ಮನ್ನಿಸಿತು. ಆದ್ದರಿಂದ ಗಾಂಧೀಜಿಯವರು ಉಪವಾಸ ನಿಲ್ಲಿಸಿದರು. ಇದಾದ ಕೇವಲ ಎರಡು ತಿಂಗಳುಗಳ ನಂತರ ಅವರು ಮತ್ತೊಂದು ಉಪವಾಸವನ್ನು ಜೈಲಿನಲ್ಲೇ ಮಾಡಿದರು. ಅಲ್ಲಿ ತಮ್ಮ ಜೊತೆಯಲ್ಲೇ ರಾಜಕೀಯ ಕೈದಿಯಾಗಿದ್ದ ಅಪ್ಪಾಸಾಹೇಬ ಪಟ್ಟವರ್ಧನರಿಗೆ ಜೈಲಿನೊಳಗೆ ಝಾಡಮಾಲಿ ಕೆಲಸ ಮಾಡಲು ಸರಕಾರವು ಅನುಮತಿ ಕೊಡದ ಕಾರಣ ಈ ಉಪವಾಸ ನಡೆಯಿತು. ಎರಡು ದಿನಗಳ ನಂತರ ಅಧಿಕಾರಿಗಳು ಒಪ್ಪಿದರು. 1932 ರಲ್ಲಿ ತಮ್ಮ ಆತ್ಮಶುದ್ಧಿಗಾಗಿ 21 ದಿನಗಳ ಉಪವಾಸ ಒಂದನ್ನು ಅವರು ಮಾಡಿದರು. 1934 ರಲ್ಲಿ ಒಬ್ಬ ಸುಧಾರಕರು ಹರಿಜನ ಚಳವಳದಲ್ಲಿ ಈ ಚಳವಳಕ್ಕೆ ವಿರುದ್ಧವಿದ್ದವನೊಬ್ಬನನ್ನು ಹೊಡೆದನೆಂದು ಮಹಾತ್ಮರು ಈ ಹಿಂಸಾಕೃತ್ಯವನ್ನು ಖಂಡಿಸಿ 7 ದಿನಗಳ ಉಪವಾಸಮಾಡಿದರು. 1939 ರಲ್ಲಿ ರಾಜಕೋಟೆಯ ಠಾಕೋರ್‌ಸಾಹೇಬರ ವರ್ತನೆಯನ್ನು ಖಂಡಿಸಿ ಸುಧಾರಣೆಗಾಗಿ 5 ದಿನಗಳ ಉಪವಾಸ ಮಾಡಿದರು. ಇಷ್ಟರಲ್ಲಿ ಈ ಸಮಸ್ಯೆಯ ಬಗ್ಗೆ ವೈಸರಾಯರು ಕೈಹಾಕಿ ಪರಿಸ್ಥಿತಿಯನ್ನು ಸುಧಾರಿಸಿದರು. ಆದರೆ ಎರಡು ತಿಂಗಳ ನಂತರ ಈ ಉಪವಾಸದಲ್ಲಿ ಹಿಂಸೆಯು ಕೈಯಿತ್ತೆಂದು ಈ ಒಪ್ಪಂದವು ಮಾನಿಸತಕ್ಕದ್ದಲ್ಲವೆಂದೂ ಗಾಂಧೀಜಿಯವರು ಸಾರಿದರು. 1943 ರಲ್ಲಿ ಮಹಾತ್ಮ ಗಾಂಧಿಯವರು ಆಗಾಖಾನ್ ಅರಮನೆಯಲ್ಲಿ ಬಂಧಿಯಾಗಿದ್ದಾಗ 21 ದಿನಗಳ ಉಪವಾಸ ಮಾಡಿದರು. ಇದರಿಂದ ಇಡೀ ಹಿಂದೂದೇಶವು ತಳಮಳಗೊಂಡಿತು. ಅವರ ಬಿಡುಗಡೆಗಾಗಿ ದೇಶವಿಡೀ ಮೊರೆಯಿಟ್ಟಿತು. ವೈಸರಾಯರ ಎಗ್ಸಿಕ್ಯುಟಿವ್ ಸಮಿತಿಯ ಸರ್ ಮೋಡಿ, ಅಣೆ, ಸರ್ಕಾರ್ ಇವರು ಸರಕಾರದ ವರ್ತನೆಯನ್ನು ನಿಶೇಧಿಸಿ ರಾಜಿನಾಮೆಯಿತ್ತರು. ಗಾಂಧೀಜಿಯವರ ಸ್ಥಿತಿ ದಿನ ದಿನಕ್ಕೆ ಚಿಂತಾಜನಕವಾಯಿತು. ಯುದ್ಧದ ಕಿಚ್ಚಿನಿಂದ

(4ನೇ ಪುಟ ನೋಡಿ)

ಕೊಡಗು

೮-೧೨-೧೯೪೪ನೇ ಶುಕ್ರವಾರ

ರ್ಯಪ್ರವರ್ತರಾಗಿರಿ.

ಮಹಾತ್ಮ ಗಾಂಧಿಜಿಯವರು ತಾ. 12-44 ರಿಂದ ಈ ತಿಂಗಳ ಅಂತ್ಯ ರೆಗೆ ಹೊಸ ರೀತಿಯ ಉಪವಾಸ ದನ್ನು ಕೈಕೊಂಡಿರುವರು. ತನ್ನ ಚರಿಯ ಯಾವ ಕೆಲಸವನ್ನೂ ಡದೆ ಅವರು ತಟಸ್ಥರಾಗಿ ಕೇವಲ ರ್ಮಿಕ ಗ್ರಂಥಗಳನ್ನು ಓದುವದ ಮಾತ್ರ ಮಗ್ನರಾಗಿರುವರು. ಉ ಸದ ಧ್ಯೇಯವನ್ನು ಹೇಳುತ್ತಾ, ಮೂರು ವಾರಗಳ ಅವಧಿಯ ವ ಯಾವ ಕೆಲಸವನ್ನೂ ಮಾಡದೆ ಶ ನ್ನು ಸಂಗ್ರಹಿಸಿಕೊಂಡು ನಂತ ಚೈತನ್ಯಯುಕ್ತನಾಗಿ ಕಾರ್ಯಕ್ಕೆ ತಗುವೆನೆಂದು ಅವರು ಹೇಳಿರುವ

ಈ ಉಪವಾಸದ ಅವಧಿಯಲ್ಲಿ ಖಾದಲ್ಲಿ ನೂಲು ಮಾಡುವದನ್ನು ನವಾಗಿಟ್ಟುಕೊಂಡಿರುವದನ್ನು ಡಿದರೆ ಮಹಾತ್ಮರು ಇಡೀ ಹಿಂ ದೇಶಕ್ಕೆ ಒಂದು ಮಾದರಿಯನ್ನು ಸಿದ್ದಾರೆ. ಇತರ ರಾಜಕೀಯ, ಮಾಜಿಕ ವಿಚಾರಗಳನ್ನು ಸದ್ಯಕ್ಕೆ ದು ಕೇವಲ ವಿಧಾಯಕ ಕಾ ಕ್ರಮಗಳಲ್ಲಿ ಸರ್ವರೂ ಮಗ್ನರಾ ಕೆಂಬುದನ್ನು ಕಾರ್ಯತಃ ಮಾಡಿ ರಿಸುತ್ತಿದ್ದಾರೆ. ಈ ವಿಚಾರವ

ಅವರು ಸಮರ್ಥಿಸಿ ಅಖಿಲ ತ ಗ್ರಾಮೋದ್ಯೋಗ ಸಂಘದ ಸಭೆಗೆ ಸಂದೇಶ ಕೊಡುತ್ತಾ ವು ನಮ್ಮ ವಿಧಾಯಕ ಕಾರ್ಯ ಗಳನ್ನು ಸರಿಯಾಗಿ ಮಾಡುವ ರೆ ಹಿಂದೂದೇಶದ ಸಮಸ್ಯೆಯ ಬಗೆಹರಿಸಲು ಡೆಲ್ಲಿಯ ಕಡೆ ಯಾ ಸಿನ ಕಡೆ ನೋಡಬೇಕಾದ ಅವ ಲ್ಲ. ಈ ಲಂಡನ್, ಡೆಲ್ಲಿಗಳು ನ ಗೆ ಬರಬೇಕಾಗುವವು' ಎಂದು ರುವರು. ಕಾಂಗ್ರೆಸಿನವರು ಮ ರ ಈ ಸೂಚನೆಗಳನ್ನು ಅಂಗೀ ಕಾರ್ಯಪ್ರವರ್ತರಾಗಬೇಕು. ಗಿನಲ್ಲಿ ಹೇಳಿಕೊಳ್ಳಲು ಗ್ರಾ ದ್ಯೋಗದ ಒಂದು ಕಾರ್ಯಕ್ರ ನಡೆದಿಲ್ಲವೆಂದರೆ ಕೊಡಗಿನ ಗ್ರೆಸಿನವರಿಗೆ, ನಾಡಿನ ಕೀರ್ತಿಗೆ ಕುಂದಕ. ಇತ್ತಲಾಗಿ ಖಾ ಯಕ್ಕೆ ಪಡೆಯುವವರು ಪ್ರತಿ ಯಿಗೆ ಆರುಪೈಯ ನೂಲು ಬೇಕೆಂದು ಮಾಡಿರುವದಾದರೂ ದ್ಯೋಗವನ್ನು ಹೆಚ್ಚಿಸುವ ಯಿಂದಾಗಿದೆ. ಇನ್ನಾದರೂ ಗಿನ ಮಹನೀಯರು ಎಚ್ಚರ ಡು ರಾಷ್ಟ್ರದ ಕರೆಗೆ 'ಓ'ಗೊಟ್ಟು ಣಬದ್ಧರಾಗಿ ಕಾರ್ಯರಂಗಕ್ಕಿಳಿ ಕು.

ಕಂಬನಿ.

ತಾರೀಕು 28-12-44 ರಲ್ಲಿ ಕೊಡಗಿನ ಸಾಹಿತ್ಯಕ್ಷೇತ್ರದಲ್ಲಿ ಅದ್ವಿತೀಯರಾಗಿದ್ದ ವ್ಯಕ್ತಿಯೊಬ್ಬರು ಕಣ್ಮರೆಯಾದರು. ಆರ್ಶೀಯವಾದ ಕಾವೇರಿ, ಯಯಾತಿ, ಸಾವಿತ್ರಿ ಮೊದಲಾದ ನಾಟಕಗಳನ್ನು ಕೊಡಗು ಭಾಷೆಯಲ್ಲಿ ಬರೆದು ಕೊಡಗಿನಲ್ಲೂ ಕವಿಹೃದಯವಿದೆಯೆಂಬ ಪರಿಚಯವನ್ನು ಹೊರಗಿನವರಿಗೆ ಮಾಡಿಕೊಟ್ಟ ಮಾನ್ಯವ್ಯಕ್ತಿಗಳು ಪರಂಧಾಮವನ್ನೈದಿದರು. ಹರದಾಸ ಅಪ್ಪನೆರವಂಡ ಅಪ್ಪಚ್ಚಕವಿಗಳು ಹೆಚ್ಚು ವಿದ್ಯಾಪಾರಂಗತರಲ್ಲದಿದ್ದರೂ ತಮ್ಮ ಕವಿತಾ ಶಕ್ತಿ, ನಾಟ್ಯಸಾಮರ್ಥ್ಯಗಳಿಂದ ಕೊಡಗಿನ ಚರಿತ್ರೆಯಲ್ಲಿ ಎಂದೂ ಅಳಿಯದ ಒಂದು ಮುದ್ರೆಯನ್ನೊತ್ತಿ ಇಹಲೋಕವನ್ನು ತ್ಯಜಿಸಿದರು. ಅಪ್ಪಚ್ಚಕವಿಗಳು ಕೊಡಗು ನಾಡಿನ ಯುವಕ ಯುವತಿಯರಿಗೆ ಮಾರ್ಗದರ್ಶಕರಾಗಿದ್ದಾರೆ. ಕೊಡಗು ನಾಡು ಸರ್ವದಿಶೆಗಳಲ್ಲೂ ಇತರ ಪ್ರಾಂತಗಳಿಗೆ ಸರಿಸಾಟಿಯೆನ್ನುವಂತೆ ಮುಂದರಿದಿದೆ. ಆದರೆ ಕಾವ್ಯ, ಕವನ ಪ್ರಪಂಚದಲ್ಲಿ ಅದು ಯಾವ ಪ್ರಗತಿಯನ್ನೂ ಮಾಡಿಲ್ಲ. ಗ್ರಂಥರಚನೆ, ವಾಗ್ಮಯಸೇವೆ, ಸಾಹಿತ್ಯ ಪ್ರಚಾರದಲ್ಲಿ ಅದು ಹೆಚ್ಚು ಮುಂದಡಿಯಿಟ್ಟಿರುವದಿಲ್ಲ. ದಿವಂಗತರು ಈ ಮಾರ್ಗವನ್ನು ತೋರಿಸಿದ್ದಾರೆ. ಆ ಮಾರ್ಗದಲ್ಲಿ ಕ್ರಮಿಸಿ ಯಥಾವಿಧಿ ಭಾಷೆಯ, ಸಂಸ್ಕೃತಿಯ, ಅರ್ಥಾತ್ ನಾಡಿನ ಸೇವೆಯನ್ನು ನಡಸುವದು ಅತ್ಯವಶ್ಯ. ಅಪ್ಪಚ್ಚಕವಿಗಳ ಈ ಆದರ್ಶವು ಕೊಡಗು ನಾಡಿನ ನೂತನ ಚೇತನಯುಕ್ತರಾದ ವಿದ್ಯಾವಂತರಿಂದ ಅನುಕರಿಸಲ್ಪಡಲಿ.

ಅಪ್ಪಚ್ಚಕವಿಗಳು ತಮ್ಮ ಜೀವನದ ಏರು ತಗ್ಗುಗಳ, ಕಷ್ಟ ಸುಖಗಳ ಘರ್ಷಣೆಗೆ ತಮ್ಮ ಸಾಹಿತ್ಯದ ಎಣ್ಣೆ ಹಚ್ಚಿ ಜೀವನವನ್ನು ಸಾರ್ಥಕಗೊಳಿಸಿದ್ದಾರೆ. ಅವರ ನಾನಾಕೃತಿಗಳು ಇನ್ನೂ ಅವರ ಹೃದಯ ಪರಿಚಯವನ್ನು ನಮಗೆ ಮಾಡಿ ಕೊಡುತ್ತಲಿವೆ. ಈ ಕವಿಗಳ ನಿಧನದಿಂದ ಅವರ ಕುಟುಂಬಕ್ಕಾದಂತೆಯೇ ಕೊಡಗು ನಾಡಿಗೂ ಅಪಾರ ದುಃಖವಾಗಿದೆ; ತುಂಬಲಾರದ ನಷ್ಟವಾಗಿದೆ. ಪ್ರಪಂಚವೆಂಬ ಈ ನಾಟ್ಯಶಾಲೆಯಲ್ಲಿ ಹರದಾಸರು ತಮ್ಮ ಪಾತ್ರವನ್ನು ಚೆನ್ನಾಗಿ ಅಭಿನಯಿಸಿ ಹೋಗಿದ್ದಾರೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ.

* * *

ಒಳದೇಶ.

ಪೊನ್ನಂಪೇಟೆ ಹೈಸ್ಕೂಲಿನ ಪ್ರೋತ್ಸಾಹಕರ ಮಹಾ ಸಭೆಯನ್ನು ತಾ. 16-12-44ರಲ್ಲಿ ಶಾಲಾ ಹಾಲ್‌ನಲ್ಲಿ ಶ್ರೀ ಪುಚ್ಚಿಮಾಡ ನಾಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲು ನಿಶ್ಚಯಿಸಿರುವರು.

1944ನೇ ಮಾರ್ಚ್ ತಿಂಗಳಲ್ಲಿ ನಡೆದ ಕೊಡಗಿನ ಕಾಮನ್ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಒಂದನೇಯದಾಗಿ ಉತ್ತೀರ್ಣನಾದ ಸೋಮವಾರಪೇಟೆಯ ಶ್ರೀ ಜಾರ್ಜ್ ರುಸೇರಿಯೋ ಎಂಬ ಬಾಲಕನಿಗೆ 'ರಾಮರಾವ್ ಮೆಮೋರಿಯಲ್' ಮೆಡಲನ್ನು ತಾ. 9-12-44 ರಲ್ಲಿ ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನದಲ್ಲಿ ಕೊಡಲಾಗುವದು.

ಈ ಮೊದಲು ತಮ್ಮ ತಂದೆಯವರಾದ ಲೇಟ್ ತಮ್ಮಣ್ಣಶೆಟ್ಟಿಯವರ ಜ್ಞಾಪಕಾರ್ಥವಾಗಿ ರೂ. 200 ಬೆಲೆಯ ಒಂದು ಹಾಕಿ ಕಪ್ಪನ್ನೂ ರೂ. 600ನ್ನೂ ಕೊಟ್ಟ ಸೋಮವಾರಪೇಟೆಯ ಪ್ಲಾಂಟರು ಶ್ರೀ ಎಚ್. ದಾಸಪ್ಪನವರು ಕೊಡಗು ಎತ್ಲೆಟಿಕ್ ಎಸೋಸಿಯೇಶನಿಗೆ ಪುನಹ ರೂ. 400ನ್ನು ಕೊಟ್ಟಿರುವರು.

ಶ್ರೀಮಂಗಲನಾಡಿನ ಶ್ರೀ ಮಲ್ಲಂಗಡ ಕುಟ್ಟಪ್ಪನವರು ತಾ. 23ರಲ್ಲಿ ತಮ್ಮ 60 ನೇ ವಯಸಿನಲ್ಲೂ, ತಾ. 27ರಲ್ಲಿ ಶ್ರೀ ಕಲ್ಲೆಟ್ಟಿರ ಗಣಪತಿಯವರೂ, ತಾ. 28ರಲ್ಲಿ ಹರದಾಸ ಅಪ್ಪನೆರವಂಡ ಅಪ್ಪಚ್ಚಕವಿಯವರು ತಮ್ಮ 76ನೇ ವಯಸಿನಲ್ಲೂ, ನಿವೃತ್ತ ಎಗ್ಸಿಕ್ಯುಟಿವ್ ಇಂಜಿನೀಯರಾಗಿದ್ದ ಶ್ರೀ ಅಪ್ಪಾರಂಡ ಮಾದಪ್ಪನನವರು ತಾ. 7-12-44 ರಲ್ಲೂ ಪರಂಧಾಮವನ್ನೈದಿದರು.

ಕೇವಲ ದುಡ್ಡಿಗೆ ಖಾದಿ ದೊರೆಯಲಾರದು.

ಇನ್ನು ಮುಂದಕ್ಕೆ ಕೇವಲ ದುಡ್ಡಿಗಾಗಿ ಖಾದಿ ದೊರೆಯಲಾರದೆಂದೂ ಖಾದಿ ಪಡೆಯುವ ಪ್ರತಿಯೊಬ್ಬನೂ ರೂಪಾಯಿಗೆ ಅರ್ಧಾಣೆ ಕ್ರಯದ ನೂಲನ್ನು ಖಾದಿ ಭಂಡಾರಕ್ಕೆ ಕೊಡಬೇಕೆಂದೂ, ಹಾಗೆ ಕೊಡದವರಿಗೆ ಖಾದಿ ದೊರೆಯಲಾರದೆಂದೂ ತಿಳಿದುಬಂದಿದೆ.

ಕಳೆದ ಹನ್ನೆರಡು ವರ್ಷಗಳಿಂದ ಚಿಕ್ಕಮುಂಡೂರು ಗ್ರಾಮಸ್ಥರಲ್ಲಿದ್ದ ಒಡಕು ಈ ಹುತ್ತರಿಯ ಸಂದರ್ಭದಲ್ಲಿ ತಾ. 28ರಲ್ಲಿ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನ ತೀರ್ಮಾನದಂತೆ ನಿವಾರಿಸಲ್ಪಟ್ಟು ಎಲ್ಲರೂ ಐಕ್ಯತೆಯಿಂದ ಹಬ್ಬವನ್ನಾಚರಿಸಿದರು. ಇದೇ ರೀತಿ ಬೆಕ್ಕಸೊಡ್ಲೂರು ಮತ್ತು ದೇವನೂರು ಗ್ರಾಮಗಳಲ್ಲಿದ್ದ ಮತಭೇದವೂ ನಿವಾರಿಸಲ್ಪಟ್ಟಿದೆ.

ಕಾಲೇಜ್ ಕಪ್ಪಿನ ಹಾಕಿ ಪಂದ್ಯಾಟದ ಮುಂದುವರಿಸಲ್ಪಟ್ಟ ಕಡೇ ಆಟವು ತಾ. 7-12-44ರಲ್ಲಿ ನಡೆದು ಮಡಿಕೇರಿ ಹೈ ಸ್ಕೂಲ್ 'ಎ' ಟೀಮಿನವರನ್ನು ಮಡಿಕೇರಿ ವಾಂಡರರ್ಸ್ ಟೀಮಿನವರು ಸೋಲಿಸಿ ಕಪ್ಪನ್ನು ಗೆದ್ದರು. ಕೊಡಗಿನ ಚೀಫ್ ಫಾರೆಸ್ಟ್ ಆಫೀಸರಾದ ಶ್ರೀ ಚನ್ನಿರ ಕುಶಾಲಪ್ಪನವರು ಗೆದ್ದವರಿಗೆ ಕಪ್ಪನ್ನು ಕೊಟ್ಟರು.

ಕೊಡಗಿನಲ್ಲಿ ಅಕ್ಟೋಬರ್ ತಿಂಗಳಲ್ಲಿ 259 ಜನನಗಳೂ, 289 ಮರಣಗಳೂ ಸಂಭವಿಸಿವೆ.

ಕಳೆದ ವರ್ಷ ಕೊಡಗಿನಿಂದ ಮಲಬಾರಿಗೆ ಕೊಟ್ಟ ಬತ್ತವನ್ನು ಅಲ್ಲಿಯ ವ್ಯಾಪಾರಸ್ಥರು ಹೆಚ್ಚಿನ ದರಕ್ಕೆ ಮಾರಿಗಳಿಸಿದ ರೂ. 30,000 ಲಾಭವನ್ನು ಅಲ್ಲಿಯ ಸರಕಾರವು ಕಂಡು ಹಿಡಿದು ಆ ಹಣವನ್ನು ಮಲಬಾರು ಬಡಜನ ಸಹಾಯಕ ಸಮಿತಿಗೆ ಕೊಡುವಂತೆ ಆಜ್ಞಾಪಿಸಿದೆ.

ತಾ. 16-12-44ರಲ್ಲಿ ನಾಪೋಕ್ಲು ಹೈಸ್ಕೂಲು ಫಂಡಿನ ವಾರ್ಷಿಕ ಮಹಾ ಸಭೆಯು ನಡೆಯುವದು.

ಯುದ್ಧಾನಂತರದಲ್ಲಿ ಕೊಡಗಿನ ವ್ಯವಸಾಯ ಕ್ರಮದ ಸುಧಾರಣೆಗಾಗಿ ಹೆಚ್ಚಿನ ಮಾಹಿತಿ ಪಡೆಯಲು ಕೊಡಗಿನ ವ್ಯವಸಾಯ ಅಧಿಕಾರಿಗಳನ್ನು ಕೊಯಮುತ್ತೂರಿಗೆ ಕಳುಹಿಸಲಿರುವರೆಂದು ತಿಳಿಯಬರುತ್ತದೆ.

ವಾರ್ತೆಗಳು.

ಜೈಲಿನಲ್ಲಿರುವ ಕಾಂಗ್ರೆಸಿಗರನ್ನು ಬಿಡುವ ಏರ್ಪಾಡುಗಳಾಗುತ್ತವೆಯೆಂದೂ, ಯಾರನ್ನು ಮೊದಲು, ಯಾರನ್ನು ಕಡೆಗೆ ಬಿಡಬೇಕೆಂದು ಪಟ್ಟಿಯಾಗುತ್ತಿದೆಯೆಂದೂ, ಬರುವ ಜನವರಿ ಅಂತ್ಯದೊಳಗೆ ಎಲ್ಲಾ ನ್ಯಾಯಶಾಸನ ಸಭಾಸದರನ್ನು, ನಂತರ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರನ್ನೂ ಬಿಡುಗಡೆ ಮಾಡಲಾಗುವದೆಂದೂ, ವರ್ಕಿಂಗ್ ಕಮಿಟಿ ಸದಸ್ಯರಲ್ಲಿ ಡಾ. ರಾಜೇಂದ್ರ ಪ್ರಸಾದರನ್ನು ಮೊದಲು ಬಿಡಬಹುದೆಂದೂ, ಸರ್ದಾರ್ ಪಟೇಲರನ್ನು ಕಡೆಗೆ ಬಿಡಬಹುದೆಂದೂ ವಾರ್ತೆ ಇದೆ.

ಸ್ವತಂತ್ರ ಭಾರತದಲ್ಲಿ ತಮ್ಮ ಸ್ಥಾನದ ಬಗ್ಗೆಯ ಕೇಳಿಕೆಯನ್ನು ಒಪ್ಪಲಿಲ್ಲವೆಂದು ಹಿಂದುಸ್ಥಾನದ ಆಶ್ರಿತ ರಾಜರುಗಳ ಚೇಂಬರಿನ ಸಮಿತಿಯವರು ರಾಜೀನಾಮೆ ಕೊಟ್ಟಿರುವರು. ಈ ಸಮಿತಿಯ ವಾರ್ಷಿಕ ಸಭೆಯು ವೈಸರಾಯರಾದ ಲಾರ್ಡ್ ವೇವೆಲ್ಲರ ಅಧ್ಯಕ್ಷತೆಯಲ್ಲಿ ತಾ. 5 ರಿಂದ ನಡೆಯಬೇಕಿತ್ತು.

ಅಖಿಲಭಾರತ ಕಾಂಗ್ರೆಸ್ ಸಮತಾವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಜಯಪ್ರಕಾಶನಾರಾಯಣರವರನ್ನು ಬಂಧಿಸಿದ ವಿಚಾರದ 'ಹಿಬಿಯನ್ ಕಾರ್ಪಸ್' ಅರ್ಜಿಯನ್ನು ತಿರಸ್ಕರಿಸಲಾಗಿದೆ. ನಾರಾಯಣರ ಪರ ಶ್ರೀ ಭುಲಾಬಾಯಿ ದೇಸಾಯಿಯವರು ವಾದಿಸಿದರು.

ಈ ಯುದ್ಧದಲ್ಲಿ ಮಾಲ್ಟಾ ದ್ವೀಪದ ಮೇಲೆ 1942ನೇ ವರ್ಷ ಅಂತ್ಯದವರೆಗೆ 14,000 ಟನ್ ಅಂದರೆ ಚದರ ಮೈಲಿಗೆ 99 ಟನ್ನಿನಂತೆ ಬಾಂಬು ಬಿದ್ದಿದೆಯೆಂದೂ ಪ್ರತಿ 200 ಪ್ರಜೆಗೆ ಒಬ್ಬರಂತೆ ಸತ್ತಿರುವರೆಂದೂ, 24,000 ಮನೆಗಳು ನಾಶವಾದವೆಂದೂ ತಿಳಿದುಬಂದಿದೆ.

ನಾದ ಶೋಚನೀಯ ಸ್ಥಿತಿ.

945 ನೇ ವರ್ಷದ ಆರಂಭದ
ತಿಂಗಳುಗಳಲ್ಲಿ ಜರ್ಮನಿಯು ಪ
ಗುವದೆಂದು ಹೇಳಿದ ಬ್ರಿಟಿಷ್
ಮಂತ್ರಿ ಚರ್ಚಿಲ್ಲರು ಮೊನ್ನೆ
ತಮ್ಮದೊಂದು ಭಾಷಣದಲ್ಲಿ
ನಿ ಯುದ್ಧ ಎಂದು ಮುಕ್ತಾ
ಗುವದೆಂದು ಹೇಳಲು ಸಾಧ್ಯ
ವಕ್ಕೂ ಹೆಚ್ಚಾಗಿ ಜರ್ಮನಿ
ಮಾಪ್ತಿಯಾದ ನಂತರ ಜಪಾನ
ಸೋಲಿಸಲು ಎಷ್ಟು ಸಮಯ
ಯುವದೆಂದು ಹೇಳಲು ಸಾಧ್ಯ
ಲ್ಲ'ವೆಂದು ನುಡಿದಿದ್ದಾರೆ. ಯು
ಗ ಮುಗಿದೀತು ಎಂದು ಆಶಿ
ಸುವವರು ಈ ಮಾತುಗಳನ್ನು ಗ
ತೆಗೆದುಕೊಳ್ಳಬೇಕು. ಯೂ
ಗೆ ಕಾಲಿಡುವದೇ ತಡ; ಶತ್ರುಗ
ಮೂಲೆಸೇರಿಸುವೆವೆನ್ನುತ್ತಿದ್ದವ
ತ್ರುವಿನ ಬಲದ ಅರಿವು ಆಗ
ಗಿದೆ. ಫ್ರಾನ್ಸಿನಲ್ಲಿ ಮಿತ್ರರು
ಆರು ತಿಂಗಳುಗಳಾಗುತ್ತಾ
ಯೂ ಫ್ರಾನ್ಸನ್ನು ಸಂಪೂರ್ಣ ವ
ಜರ್ಮನ್ ಗಡಿಗೆ ನುಗ್ಗುವ
ಲ್ಲ. ಈಗೀಗ ಜರ್ಮನರ ಪ್ರತಿ
ಬಹು ಭೀಕರವಾಗಿದೆ. ಮಿ
ರ್ಮೈನ್ ಪ್ರಾಂತದ ಕಡೆ ಸಾಗು
ರೆ. ಈ ಪ್ರಾಂತವು ಬಹು
ಮುಖ್ಯವಾದುದು. ಇಲ್ಲಿ ಜರ್ಮ
ತಮ್ಮ ಸರ್ವಶಕ್ತಿಯಿಂದ ಹೋ
ರು. ಯೂರೋಪಿನಲ್ಲಿ ಚ
ಪ್ರಾರಂಭವಾಗಿರುವರಿಂದ
ಸ ಕೆಲವು ತಿಂಗಳುಗಳ ವರೆಗೆ
ಗವಲ್ಲಿ ವಿಮಾನ ಧಾಳಿಯಿಲ್ಲದೆ
ಪ ಯುದ್ಧವು ಸಾಧ್ಯವೋ ತಿ
ದು. ಈ ಮಧ್ಯೆ ಯೂರೋಪು
ಲ್ಲಿ ನಾನಾರೀತಿಯ ಅವ್ಯವಸ್ಥೆಗ
ಲೆದೋರತೊಡಗಿವೆ. ರಷ್ಯದ
ನ್ನು ಯೂರೋಪಿನಲ್ಲಿ ಬೆಳೆಯು
ವದು ಅನೇಕರಿಗೆ ಅಸಮಾಧಾನ
ಂಟುಮಾಡಿದೆ. ಇರಾನಿನಲ್ಲಿ ಎ
ಬಗ್ಗೆ ಪರದೇಶೀಯರಿಗೆ
ಯಿತಿ ಕೊಡಲಾಗುವ
ದು ಸಾರಿದ್ದಾರೆ. ಬೆಲ್ಜಿ
ನಲ್ಲಿ ಹೊಸ ಸರಕಾರವು ಮಿತ್ರ
ಣೆಯಿಂದ ಸ್ಥಾಪಿತವಾದರೂ
ತವಾದ ಕೆಲವೇ ಸಮಯದೊಳ
ಸೃಷ್ಟಿ ತಲೆಯೆತ್ತಿದೆ. ಸ್ಪೈಯಿನಿ
ಪುನಹ ಆಂತರ್ಕಲಹದ ಚಿಹ್ನೆ
ಬರುತ್ತಿದೆ. ಫ್ರಾನ್ಸಿನಲ್ಲಿ ಮಿ
ಅನುಸರಿಸುತ್ತಿರುವ ನೀತಿ ಫ್ರೆಂ
ಸಂಶಯಹುಟ್ಟಿಸುವಂಥಾದ್ದಿ
ಗ್ರೀಸಿನಲ್ಲಿ ಆಂತರಿಕ ದಂಗೆ ಪ್ರಾ
ವಾಗಿದೆ. ಫ್ರಾನ್ಸಿನ ಜನರಲ್
ಲೆಯುವರು ಈ ಸಂದರ್ಭದಲ್ಲಿ ರ
ಸ್ಟಾಲಿನರನ್ನು ಭೇಟಿಯಾಗಲು
ಟಿರುವರು. ಈ ರೀತಿ ನಾನಾ

ರೀತಿಯ ವಿಚಾರ ಪ್ರವಾಹಗಳ ತಾಕಲಾಟದಿಂದಾಗಿ ಮಿತ್ರರ ಯುದ್ಧ ಪ್ರಗತಿಗೆ ಅಡಚಣೆ ಆಗುವದರಲ್ಲಿ ಸಂಶಯವಿಲ್ಲ.

ಪೂರ್ವಭಾಗದಲ್ಲಿ ರಷ್ಯನ್ ಸೇನೆಗಳು ಮುಂದರಿಯುತ್ತಿವೆ. ಬುಡಾಪೆಸ್ಟ್ ಕಾಳಗ ಪ್ರಾರಂಭವಾಗಿ ಒಂದೂವರೆ ತಿಂಗಳುಗಳಾದವು. ಅದು ಮಿತ್ರರ ಕರಗತವಾಗುವದರಲ್ಲಿತ್ತು. ಆದರೆ ಇದೀಗ ಆ ನಗರವು ಅಜೇಯವಾಗಿ ನಿಂತಿದೆ. ಅದರ ಕದನವು ಬಹು ಘೋರರೀತಿಯಿಂದ ಸಾಗುತ್ತಿದೆ. ಜರ್ಮನರು ವಿಶಿಷ್ಟವಾದ ಸಿದ್ಧತೆಯನ್ನು ಈ ನಗರ ರಕ್ಷಣೆಗಾಗಿ ಮಾಡಿರುವರು. ಈ ನಗರವು ವಿಯನ್ನಾಕ್ಕೆ ಹೆಬ್ಬಾಗಿಲಿನಿನಂತಿದೆ. ಜರ್ಮನರು ಈ ರೀತಿ ಬಹು ಸಾಮರ್ಥ್ಯದಿಂದ ಪ್ರತಿಭಟಿಸುತ್ತಿರುವದರಿಂದ ರಷ್ಯನರ ಪ್ರಗತಿ ಸಾಕಷ್ಟು ಆಗಿಲ್ಲ.

ಪೂರ್ವದಲ್ಲಿ ಜಪಾನರ ಮೇಲೆ ಅಮೇರಿಕನರು ಹೂಡಿದ ಯುದ್ಧವು ಮಂದಗತಿಯನ್ನು ತಳೆದಿದೆ. ಲೆಟಿದ್ವೀಪವು ವಶವಾಗದೆ ಇನ್ನೂ ನಿಂತಿದೆ. ಮಳೆಯಿಂದಾಗಿ ಈ ಭಾಗದ ಯುದ್ಧವು ಬಿರುಸಾಗಿಲ್ಲ. ಆದರೂ ಜಪಾನರು ತಮ್ಮ ಕೆಚ್ಚೆದೆಯ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಅಮೇರಿಕನರು ಒಂದೊಂದಾಗಿ ದ್ವೀಪಗಳನ್ನು ವಶಪಡಿಸಿಕೊಂಡು ಮುಂದೆ ಬಂದು ಲೆಟಿಗೆ ತಲಪಿರುವರಷ್ಟೆ. ಜಪಾನರು ಈ ಅಮೇರಿಕನ್ ದಳದ ಬೆನ್ನ ಹಿಂದಿರುವ ಮೊರಟಾಯ್ ಎಂಬ ದ್ವೀಪದಲ್ಲಿಳಿದು ಕಾದತೊಡಗಿದ್ದಾರೆ. ಇದರಿಂದ ಅಮೇರಿಕನ್ ದಳಗಳಿಗೆ ಕೊಂಚ ಗಾಬರಿಯಾಗಿರಬಹುದು. ಜಪಾನರ ಶಕ್ತಿ ಕುಗ್ಗಿಲ್ಲ ಎಂಬುದಕ್ಕೆ ಅವರ ಈ ಧಾಳಿಯೊಂದು ನಿದರ್ಶನವಾಗಿದೆ.

ಇತ್ತ ಚೈನೀಯರ ಪರಿಸ್ಥಿತಿ ತೀರಾ ಚಿಂತಾಜನಕವಾಗಿದೆ. ಜಪಾನರು ಬಹು ಬಿರುಸಿನಿಂದ ಮುಂದೊತ್ತಿಬರುತ್ತಿದ್ದಾರೆ. ಬಹು ಪ್ರಾಮುಖ್ಯ ಪ್ರದೇಶವಾದ ಕ್ವೆಯೊಂಗನ್ನು ವಶಪಡಿಸಿಕೊಳ್ಳಲು ಅವರು ಪ್ರಯತ್ನಿಸುತ್ತಿದ್ದಾರೆ. ಅದು ಜಪಾನರ ವಶವಾದರೆ ಚೀನೀಯರ ಅರ್ಥಶಕ್ತಿ ಕುಗ್ಗಿದಂತಾಗುವದು. ಚೀನಾದ ಪರಿಸ್ಥಿತಿ ಎಷ್ಟರ ಮಟ್ಟಿಗೆ ಬಿಗಡಾಯಿಸಿಕೊಂಡಿದೆಯೆಂದರೆ ಚೀನಾಕ್ಕೆ ಬಂದಿರುವ ಗಂಡಾಂತರವನ್ನು ನೋಡಿ ಚೀನಾದ ಕಮ್ಯೂನಿಸ್ಟ್ ಮತ್ತು ಚಿಯೊಂಗ್ ಪಂಗಡಗಳು ಒಂದಾಗತೊಡಗಿವೆ. ಮಾರ್ಷಲ್ ಚಿಯೊಂಗ್ ಕೈಶೆಕರು ಡಾ. ಟಿ. ವಿ. ಸೂಂಗರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿ ತಾವೇ ಸ್ವತಹ ಯುದ್ಧ ರಂಗಕ್ಕೆ ತೆರಳಿದ್ದಾರೆ. ಜಪಾನರು ಒಳ್ಳೆ ಶಿಸ್ತಿನಿಂದ ಮುಂದರಿಯುತ್ತಿದ್ದಾರೆ. ಚೀನಾ ಯುದ್ಧವನ್ನು ಶೀಘ್ರ ಮುಗಿಸುವ ಪ್ರಯತ್ನದಲ್ಲಿದ್ದಾರೆ.

ಬಾತ್ಮಿ.

ಸಂಪಾದಕರಿಗೆ ಪತ್ರ.

ಅಯ್ಯಾ ಸಂಪಾದಕರೇ,

ಕೊಡಗು ವಿದ್ಯಾ ಇಲಾಖೆಯ ವಿಚಾರ ಹಲವಾರು ಲೇಖನಗಳನ್ನು ನಿಮ್ಮ ಪತ್ರಿಕೆಯಲ್ಲಿ ಓದಿದ್ದೇನೆ. ಅವುಗಳಲ್ಲಿ ಉಕ್ತವಾಗಿದ್ದ ಸೂಚನೆಗಳ ಬಗ್ಗೆ ಸಂಬಂಧಪಟ್ಟವರು ಯಾವ ಕಾರ್ಯ ಕೈಕೊಳ್ಳುವರೆಂದು ಈ ವರೆಗೆ ಪರಿಶೀಲಿಸಿದೆನು. ಆದರೆ ವಿದ್ಯಾ ಇಲಾಖೆಯವರೂ, ಜಿಲ್ಲಾ ಬೋರ್ಡಿನವರೂ ಯಾವುದೇ ರೀತಿಯ ನಿಗಪಿಟ್ಟಂತೆ ಕಂಡುಬರುವದಿಲ್ಲ. ಈ ರೀತಿಯ ಅನಾಸಕ್ತಿಯಿಂದಾಗಿ ಕೊಡಗಿನ ವಿದ್ಯಾಭ್ಯಾಸವು ಅಧಃಪಾತ ಹೊಂದುತ್ತಿದೆ. ನನಗೆ ಚೆನ್ನಾಗಿ ಗೊತ್ತಿರುವ ಒಂದು ನಿದರ್ಶನವನ್ನು ಈ ಮೂಲಕ ಸಂಬಂಧಪಟ್ಟ ಅಧಿಕಾರಿಗಳ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ಜಿಲ್ಲಾ ಬೋರ್ಡಿನ ಮೇಲುಸ್ತುವಾರಿಯಲ್ಲಿರುವ ಮಡಿಕೇರಿ ಹೈಯರ್ ಎಲಿಮೆಂಟರಿ ಶಾಲೆಯು ಈ ಭಾಗದಲ್ಲಿ ತಕ್ಕಮಟ್ಟಿಗೆ ಜನರ ಪ್ರಶಂಸೆಯನ್ನು ಪಡೆದಿತ್ತು. ಈಗಲೂ ಈ ಶಾಲೆಯಲ್ಲಿ 580 ವಿದ್ಯಾರ್ಥಿಗಳಿದ್ದಾರೆ. ಎ. ಬಿ. ಭಾಗಗಳು ಸೇರಿ ಒಟ್ಟು ಹನ್ನೆರಡು ತರಗತಿಗಳಿವೆ. ಈ ಹನ್ನೆರಡು ತರಗತಿಗಳಿಗಾಗಿ ಕಳೆದ ಹಲವು ತಿಂಗಳುಗಳಿಂದ ಬರೇ ಎಂಟು ಉಪಾಧ್ಯಾಯರುಗಳು ಇರುವರು. ಕಳೆದ ಆರು ತಿಂಗಳಿಂದ ಎರಡನೇ ಫಾರ್ಮು ತರಗತಿಯಲ್ಲಿ ಸರಿಯಾಗಿ ಪಾಠ ನಡೆಯುತ್ತಿಲ್ಲವೆಂದೂ ಇಂಗ್ಲಿಷ್ ಪಾಠವನ್ನು ಪ್ರಾರಂಭಿಸಿಯೇ ಇಲ್ಲವೆಂದೂ ತಿಳಿಯಬರುತ್ತದೆ. ಅಧ್ಯಾಪಕರು ಇಲ್ಲದ ಕಾರಣ ಸರ್ವವೂ ಅಸ್ತವ್ಯಸ್ತಗೊಂಡಿದೆ. ಜಿಲ್ಲಾ ಬೋರ್ಡಿನ ಶಾಲೆಗಳಲ್ಲಿ ಪ್ರಥಮ ದರ್ಜೆಯಲ್ಲಿರುವ ಈ ಶಾಲೆಯ ಗತಿಯೇ ಹೀಗಿರುವಾಗ ಬೇರೆ ಶಾಲೆಗಳ ಸ್ಥಿತಿಯನ್ನು ಬರೆಯುವುದಕ್ಕಿಂತ ಯೋಚಿಸಿಕೊಳ್ಳುವದು ಉತ್ತಮ. ಜಿಲ್ಲಾ ಬೋರ್ಡಿನಲ್ಲಿ ದುಡ್ಡಿಲ್ಲವೆಂದು ಬೋರ್ಡಿನವರು ಹೇಳಿಬಿಟ್ಟರೆ ವಿದ್ಯಾಪ್ರಚಾರದ ಬಗ್ಗೆ ಇರುವ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಯಿತೇ? ಯೋಗ್ಯ ಮಾರ್ಗಗಳಿಂದ ಹಣ ಒದಗಿಸಿ ನಾಡಿನ ನಾಡಿಯಂತಿರುವ ವಿದ್ಯಾ ಸಂಸ್ಥೆಗಳನ್ನು ಪೋಷಿಸುವದು ಆದ್ಯ ಕರ್ತವ್ಯ. ಇಂಥಾ ಸಂದಿಗ್ಧ ಕಾಲಗಳಲ್ಲಿ ತಮ್ಮ ಕುಶಲತೆ ಮತ್ತು ಕಾರ್ಯಚತುರತೆಗಳನ್ನು ತೋರಿಸಬೇಕಲ್ಲದೆ ಮತ್ತೆ ಯಾವಾಗ? ಜಿಲ್ಲಾ ಬೋರ್ಡಿನವರು ಶೀಘ್ರವಾಗಿ ತಕ್ಕ ವ್ಯವಸ್ಥೆ ಮಾಡಿ ಮುಂದಿನ ಪೀಳಿಗೆಯ ಹಿತ ಸಾಧಿಸಬೇಕು. ಸ್ಥಾನಿಕ ಸಂಸ್ಥೆಗಳ ಬಗ್ಗೆ ಜಡ ಪ್ರಕೃತಿಯನ್ನು ತಳೆದಿರುವ ಸರಕಾರದಲ್ಲಿ ಚೇತನ ಹುಟ್ಟುವಂತೆ ಮಾಡಬೇಕು. ಇನ್ನೂ ಜಿಲ್ಲಾ ಬೋರ್ಡಿನವರು ಮತ್ತು ಸರಕಾರದವರು ವಿದ್ಯಾಭ್ಯಾಸದ ಈ ಮಹಾ ಸಮಸ್ಯೆಯ ಬಗ್ಗೆ ಅನಾಸಕ್ತಿಯನ್ನು ತಳೆದು ಸಾರ್ವಜನಿಕರ ಕೇಳಿಕೆಯನ್ನು ಅರಣ್ಯರೋಧನವಾಗಿ ಪರಿಗಣಿಸುವುದಾದರೆ ಕೊಡಗಿನ ಭವ್ಯ ಭವಿಷ್ಯ ವೃಕ್ಷಕ್ಕೆ ಕೊಡಲಿ ಹಾಕಿದ ಜವಾಬ್ದಾರಿಯನ್ನು ಹೊರಬೇಕಾಗುವದು. ಇನ್ನಾದರೂ ಸಂಬಂಧಿಸಿದವರು ಎಚ್ಚರಗೊಂಡು ಕಾರ್ಯಪ್ರವರ್ತರಾಗುವರೇ?

'ಎಂ. ಬಿ. ಎಂ.'

ಶ್ರೀ ಶಾರದಾ ಕಾಫಿ ಪುಡಿ.

ಯಾವುದೊಂದು ಮಿಶ್ರಣವಿಲ್ಲದೆ ಪ್ರತಿ ದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ಕಾಫಿ ಹುಡಿಯ ಕ್ರಯ
ರಾತ್ಲಿಗೆ ರೂ. **1-11-6**

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮಪ್ರಕಾರವಾಗಿ ಹುರಿದು ಪುಡಿಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.

ಹುಡಿ ಮಾಡಲು
ಅಳತೆ ಸೇರಿಗೆ ಆ. **0-1-6**

SHRI SHARADA COFFEE HOME (WORKS),
9) McDOWELLS BUILDINGS, *MERCARA*.

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತವೆ.
5) ಕೊಡಗಿನ ಪ್ರವರ್ತಕರು:-
ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಮುದ್ದಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್ಸ್.
ಮೋಹನ್ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

"ಟ್ರಾಪಿಕಲ್"
ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಡಾ. ಯಂ. ಎ. ಅನ್ಸಾರಿ, ಸುಭಾಶಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.
ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.
ಮುಖ್ಯ ಖಚೇರಿ: **ಹೊಸ ಡಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:-
ಯಂ. ಯು. ಅಚ್ಚಣ್ಣ, ಮಡಿಕೇರಿ. OR **ಯಂ. ರಂಗನಾಥಶೆಟ್ಟಿ,** ಬ್ರಾಂಚ್ ಮೇನೇಜರ್, ಮಂಗಳೂರು.
45)

The Canara Banking Corporation Limited.
(Incorporated in British India)
ETD— Head Office—UDIPI, (S. K.) —1906
Paid up capital .. .. .. Rs. 14,38,255
Reserves .. .. Rs. 4,10,000
Total working Resources .. .. Exceed Rs. 1 Crore

ANNOUNCEMENT.
Branchs of the Bank will Shortly be Opened at
7) HUBLI & DHARWAR.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
— ಬೇಕಾಗಿದ್ದಾರೆ —
ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.
ಕೊಚ್ಚಿಕಾರ್ ಬ್ರದರ್ಸ್, ಲಿ.
ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
11) ಪಿ. ಬಿ. ನಂ. 337, ಮದ್ರಾಸು.

ಧಾತು ವೃದ್ಧಿ ರಸಾಯನ (ZANDU)
“ರ್‍ಯಾಕ್ಟೋ—ಫಾಸ್ಫೋ—ಮೂಲ್ಟ್”
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.
ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.
ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.
ಇದರಲ್ಲಿ ಇಲೆಕ್ಟ್ರೋ ಪಾಸ್ಫೋಮೂಲ್ಟ್, ಹಿಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಕ್ಯಾಲ್ಸಿನ್, ಸಾಲ್, ಮೂಲ್ಟ್ ಎಕ್ಸ್‌ಟ್ರ್ಯಾಕ್ಟ್, ದ್ರಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿದೆ.
ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
13) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
49) ಸ್ಥಾಪನೆ:—೧೮೯೭.
೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು. }
ಒಟ್ಟು ಆದಾಯ ೯೭,೩೭,೦೦೦ ಮೀರಿದೆ
ಚಾಲ್ತಿಯಿರುವ ವಿಮೆ ೧೬,೪೯,೮೮,೦೦೦ ,,
ಆಸ್ತಿ .... ೬,೩೦,೪೬,೦೦೦ ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು ೮,೩೪,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.
ವಸೂಲಾದ ಶೇರ್ ಮೊಬಲಗು ರೂ. 95,060, ಜಮಾ ಬಂದ ಠೇವಣಾತಿ 2,24,755 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.
ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at
'Kodagu' Press, Mercara, for 'Kodagu' Ltd.

ದಿವಂಗತ ಅಪ್ಪನೆರವಂಡ ಅಪ್ಪಚ್ಚನವರು.

ಲೇ:—'ಪರಿಚಿತ' ನಾಪೋಕ್ಲು.

ಸನ್ ೧೮೬೮ ನೇ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ಕಡಿಯತ್ತುನಾಡು ಕಿರುಂದಾಡು ಗ್ರಾಮದಲ್ಲಿ ಇವರು ಜನಿಸಿದರು. ಚಿಕ್ಕಂದಿನಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡ ಪ್ರಯುಕ್ತ ವಿದ್ಯಾಭ್ಯಾಸ, ಪೋಷಣೆಯನ್ನು ಅಜ್ಜ ಮಾವಂದಿರಿಂದ ಪಡೆಯಬೇಕಾಯಿತು. ಕನ್ನಡ ವಿದ್ಯಾಭ್ಯಾಸವು ಹಳ್ಳಿಯ ಶಾಲೆಯಲ್ಲೇ ನಡೆದು, ಕೊಂಚಕಾಲ ಇಂಗ್ಲಿಷನ್ನು ಸಹ ಕಲಿಯಲು ಯತ್ನಿಸಿದರು. ಇವರ ೨೦ ನೇ ವಯಸ್ಸಿನಲ್ಲಿ ಮುಜರಾಯಿ ಇಲಾಖೆಯಲ್ಲಿ ಕೆಲಸ ದೊರೆಯಿತು. ಮಡಿಕೇರಿಯ ಓಂಕಾರೇಶ್ವರ ದೇವಸ್ಥಾನದಲ್ಲಿದ್ದಾಗ್ಯೆ, ತಿಪಟೂರು ನಾಟಕಮಂಡಲಿಯವರು ದೇವಸ್ಥಾನದ ಗಾರೆಕೋಟದಲ್ಲಿ ತಮ್ಮ ಡೇರೆಹಾಕಿ ನಾಟಕಗಳನ್ನಾಡುತ್ತಿದ್ದರು. ಆ ಕಂಪೆನಿಯ ಒಬ್ಬ ಸ್ತ್ರೀ ಪಾರ್ಟುದಾರರು ಇವರಿಗೆ ಕೆಲವು ಪಾಠಗಳನ್ನು ಕಲಿಸಿಕೊಟ್ಟು, ಇವರನ್ನು ಒಂದೆರಡು ಸಣ್ಣಪುಟ್ಟ ಪಾತ್ರಗಳ ಅಭಿನಯಕ್ಕೆ ಹಚ್ಚಿದರು. ಅಂದಿನಿಂದ ಅವರಿಗೆ ನಾಟಕದಲ್ಲಿ ಅಧಿಕ ಆಸಕ್ತಿಯುಂಟಾಯಿತು. ಆದೇ ಸಮಯದಲ್ಲಿ ದಿವಂಗತ ಶ್ರೀ. ವೆಂಕಟಾದ್ರಿ ಶಾಮರಾಯರು ಸ್ಥಾಪಿಸಿದ್ದ ನಾಟಕಕಂಪೆನಿಯಲ್ಲಿ ಅವರು ಒಬ್ಬ ಶ್ರೇಷ್ಠ ನಟರಾಗಿ ಸೇರಿಕೊಂಡರು.

ಕೈಲಾಸವಾಸಿ ಅಪ್ಪಚ್ಚನವರು ಕವಿತಾಶಕ್ತಿಯನ್ನು ಸಂಪಾದಿಸಿದ್ದು ಕವಿವೆಂಕಟಾದ್ರಿ ಶಾಮರಾಯರಿಂದ. ಇವರು ಶಾಮರಾಯರನ್ನು ತಮ್ಮ ಗುರುಗಳೆಂದು ಭಾವಿಸಿ ಅವರಲ್ಲಿಗೆ ಹೋಗಿ ಅವರ ನಾಟಕ ಪದಗಳನ್ನು ಕಲಿಯುತ್ತಿದ್ದುದಲ್ಲದೆ, ತಾವು ರಚಿಸಿದ ಪದಗಳನ್ನು ಅವರಿಗೆ ತೋರಿಸಿ ತಿದ್ದಿಸಿಕೊಳ್ಳುತ್ತಿದ್ದರು.

ಕೆಲವು ಸಮಯದ ನಂತರ ಮಡಿಕೇರಿಯಿಂದ ಭಾಗಮಂಡಲಕ್ಕೆ ವರ್ಗವಾಯಿತು. ಕನ್ನಡದಲ್ಲಿ ಹಾಡುಗಳನ್ನು ರಚಿಸುತ್ತಿದ್ದವರು, ಅನಂತರ ತಮ್ಮ ಹಾಡುಗಳನ್ನು ಕೊಡಗು ನುಡಿಯಲ್ಲಿ ಬರೆಯಲು ಪ್ರಾರಂಭಿಸಿದರು. ವಿದ್ಯಾ ಇಲಾಖೆಯ ಮೇಲ್ವಿಚಾರಕರಾಗಿದ್ದ ದಿವಂಗತ ಶ್ರೀ. ರಘುನಾಥರಾಯರು ಇವರನ್ನು ಭೇಟಿಮಾಡಿ ಇವರ ಕವನಗಳನ್ನು ಕೇಳಿ ಸಂತೋಷಪಟ್ಟು ಸ್ವಭಾಷೆಯಲ್ಲಿ ಸಾಹಿತ್ಯಸೇವೆ ಮಾಡಬೇಕೆಂದು ಪ್ರೋತ್ಸಾಹಿಸಿದರು. ಕೊಡಗು ಭಾಷೆಯಲ್ಲಿ ಇವರು ಯಯಾತಿ, ಸುಬ್ರಹ್ಮಣ್ಯ, ಸಾವಿತ್ರಿ ಮತ್ತು ಕಾವೇರಿ ಮಹಾತ್ಮೆ ಎಂಬ ನಾಟಕಗಳನ್ನು ರಚಿಸಿದರು. ತಮ್ಮದೇ ಒಂದು ನಾಟಕ ಕಂಪೆನಿಯನ್ನು ಸ್ಥಾಪಿಸಿ, ಕೊಡಗಿನ ಅನೇಕ ಭಾಗಗಳಲ್ಲಿ ಆಟಗಳನ್ನಾಡಿದಾಗ, ಇವರ ನಾಟಕಗಳನ್ನು ನೋಡಿದ ಕೆಲವು ದೊಡ್ಡ ಮನುಷ್ಯರು ಇವರ ನಾಟಕಗಳನ್ನು ಅಚ್ಚು ಹಾಕಿಸಲು ಮುಂದೆ ಬಂದು ಅಚ್ಚು ಹಾಕಿಸಿದರು. ೧೯೦೯ ರಲ್ಲು ಇವರು ತಮ್ಮ ನಾಟಕ ಮಂಡಳಿಯೊಂದಿಗೆ ಕನ್ನಡ ನಾಟಕಗಳನ್ನು ಸಹ ಕೊಡಗಿನಲ್ಲೂ, ಮೈಸೂರಿನ ಕೆಲವೆಡೆಗಳಲ್ಲೂ ಪ್ರದರ್ಶಿಸಿದರು. ಅವರ ಕಂಪೆನಿಯು ಒಡೆದು ಹೋಗಲಾಗಿ ಅನೇಕ ಕಷ್ಟನಷ್ಟಗಳಿಗೆ ಗುರಿಯಾದರು. ಅಚ್ಚಾಗದ ಸುಕನ್ಯಾ ಎಂಬ ಕನ್ನಡ ನಾಟಕವನ್ನು ರಂಗಭೂಮಿಗಾಗಿ ಬರೆದಿರುವರು. ಇವರು ಮಾನ್ಯ ಕವಿಗಳಾಗಿದ್ದರು.

ಮುಜರಾಯಿ ಇಲಾಖೆಯ ಮೇನೇಜರಾಗಿ ತಮ್ಮ ೫೦ ನೇ ವರ್ಷದಲ್ಲಿ ಪಿಂಚಿನ ಮೇಲೆ ವಿಶ್ರಾಂತಿಯನ್ನು ಹೊಂದಿದರು. ಆಗಿಂದಾಗ್ಯೆ ಕೀರ್ತನೆಗಳನ್ನು ಮಾಡಿ 'ಹರಿದಾಸ ಅಪ್ಪಚ್ಚ ಕವಿ' ಎಂದು ಹೆಸರು ಪಡೆದರು. ಕಳೆದ ನವಂಬರು ತಿಂಗಳು ೨೬ ನೇ ಆದಿತ್ಯವಾರ ತಮ್ಮ ಸ್ವಂತ ಮನೆಯಲ್ಲಿ ಕೆಲವು ಸಮಯದ ವರೆಗೆ ಕಾಯಿಲಸ್ಥರಾಗಿದ್ದು, ತಮ್ಮ ೭೭ ನೇ ವಯಸ್ಸಿನಲ್ಲಿ ಸ್ವರ್ಗಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಅವರ ಆತ್ಮಕ್ಕೆ ಶಾಂತಿಯಿರಲಿ.

(1ನೇ ಪುಟದಿಂದ ಸಾಗಿದ್ದು)

ಬೆಂದು ತಪಿಸುತ್ತಿದ್ದ ಹಿಂದೂದೇಶದ ಲಕ್ಷ್ಯವಿಲ್ಲದಿದ್ದ ಜಗತ್ತು ಹಿಂದೂದೇಶದ ಈ ಮಹಾವ್ಯಕ್ತಿಯ ಉಪವಾಸ, ಜನತೆಯ ಮೇಲೆ ಅದರಿಂದಾದ ಪರಿಣಾಮವನ್ನು ಕಣ್ಣೆವೆಯಿಕ್ಕದೆ ನೋಡುವ ಸ್ಥಿತಿ ಬಂತು. ಮಹಾಮಹಾ ಡಾಕ್ಟರುಗಳು ಗಾಂಧೀಜಿಯವರು ಉಳಿಯಲಾರರೆಂದರು. ಆದರೆ ತಾನು ಸಾಯಲಾರೆನೆಂದು ಹೇಳಿ ಸರ್ವರೂ ದಂಗುಗೊಳ್ಳುವಂತೆ ಮಹಾತ್ಮರು ಉಪವಾಸವನ್ನು ಮುಗಿಸಿದರು.

ಇಂದು ಪುನಹ ಉಪವಾಸ ಕೈಕೊಳ್ಳಲು ಅವರು ಸಿದ್ಧರಾಗುತ್ತಿದ್ದಾರೆ. ಈ ಉಪವಾಸದ ವ್ಯವಹಾರ ಕ್ಷೇತ್ರ ಕೇವಲ ಹಿಂದೂದೇಶವಲ್ಲ; ಇಡೀ ಜಗತ್ತಿನಲ್ಲಿ ನಡೆಯುತ್ತಿರುವ ಅನ್ಯಾಯಗಳಿಗಾಗಿ, ಪರಿತಪಿಸುತ್ತಿರುವ ನಿಮ್ನ ವರ್ಗದವರಿಗಾಗಿ ಈ ಉಪವಾಸ. ಜಗತ್ತಿನ ಪರಿಸ್ಥಿತಿ, ಜನಾಂಗಗಳ ನಡತೆ, ಇವುಗಳನ್ನು ನೋಡಿದರೆ ಈ ಉಪವಾಸವು ಫಲಕಾರಿಯಾದೀತೋ ಎಂದು ಸಂಶಯವಾಗುತ್ತದೆ. ಆದರೆ ಉಪವಾಸ ಅಸ್ತ್ರಕ್ಕೆ ಗಾಂಧೀಜಿಯವರೆನ್ನುವಂತೆ ಸೋಲೆಂಬುದಿಲ್ಲ ಆದರ್ಶ ಈ ವರೆಗಿನ ಪ್ರಯೋಗಗಳೆಲ್ಲದರಲ್ಲೂ ಅದು ವಿಜಯಿಯಾಗಿದೆ. ಈ ಗತ ವಿಚಾರಗಳು ಈಗಿನ ಪ್ರಯತ್ನಕ್ಕೂ ಜಯ ದೊರೆಯುವದು ಎಂಬುದನ್ನು ಸಮರ್ಥಿಸುತ್ತವೆ. ಮಹಾತ್ಮ ಗಾಂಧಿಯವರು ಉಪವಾಸದ ವಿಚಾರ ಹೇಳುತ್ತಾ—'ಉಪವಾಸ ಮತ್ತು ಸತ್ಯಾಗ್ರಹಗಳಿಗೆ ಮಿತಿಯಿದೆ. ಒಬ್ಬ ಕ್ರೂರಿಯ ವಿರುದ್ಧ ಉಪವಾಸ ಮಾಡುವದು ಹಿಂಸೆಯಾಗುವದು. ಯಾರು ಪ್ರೀತಿಸುತ್ತಾರೋ ಅವರ ಬಗ್ಗೆ ಉಪವಾಸ ಮಾಡಬೇಕು. ತಂದೆಯು ಕುಡುಕನಾಗಿ ಅದನ್ನು ಬಿಡಿಸಲು ಮಗನು ಉಪವಾಸ ಮಾಡುವದು ಹಿತವಾದುದು; ಯೋಗ್ಯವಾದುದು. ಉದಾಹರಣೆಗೆ ಜನರಲ್ ಡಯರ್‌ನಂಥಾ ಕಡು ವಿರೋಧಿಗಳ ಇದಿರು ಉಪವಾಸ ಮಾಡಲು ಸಾಧ್ಯವಿಲ್ಲ' ಎಂದಿದ್ದಾರೆ. ಆದ್ದರಿಂದ ಇಂದು ಜಗತ್ತಿನಲ್ಲಿ ಮಹಾತ್ಮರನ್ನು ಪ್ರೀತಿಸುವವರು, ಮೆಚ್ಚುವವರು ಯಾರಿದ್ದಾರೆ; ಅವರ ಸದ್ವರ್ತನೆಗಾಗಿ, ಅವರು ಕಾರ್ಯ ಪ್ರವರ್ತರಾಗಬೇಕೆಂಬುವುದಕ್ಕಾಗಿ ಈ ಉಪವಾಸವನ್ನು ಅವರು ಕೈಕೊಳ್ಳಬಹುದು. ಆದರೆ ಉಪವಾಸವೆಂಬ ಶಬ್ದವೇ ಹೆದರಿಕೆಯ ವಿಚಾರವಾಗಿ ಭಾರತೀಯರಿಗೆ ಪರಿಣಮಿಸಿದೆ. ಕಳೆದ ಉಪವಾಸದಲ್ಲಿ ಮಹಾತ್ಮರ ಸ್ಥಿತಿ ಇಡೀ ಭರತಖಂಡವನ್ನು ದುಃಖಾತಿರೇಖದಿಂದ ತೋಯಿಸಿದೆ. ಅವರು ಪುನಹ ಉಪವಾಸ ಕೈಕೊಳ್ಳುವುದೆಂದರೆ ಹೃದಯ ನಡುಗುತ್ತದೆ. ಭಗವಂತನು ಅಂಥಾ ಪ್ರಸಂಗವನ್ನು ಕಲ್ಪಿಸದಿರಲಿ.